**<u>ಸಾಕ್ಷಿಯನ್ನು ದಿನಾಂಕಃ 19.12.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ.ಪಿ.ಎಂ.ಬಿ, ವಕೀಲರಿಂದಃ</u>**

ಅಡಮಾನ ಪತ್ರವನ್ನು ವಿಮೋಚನೆ ಮಾಡಿಕೊಳ್ಳುವಂತೆ ಪ್ರತಿವಾದಿಗೆ ನೋಟಿಸ್ ನೀಡಿಲ್ಲ. ನನ್ನ ತಂದೆ ಮೃತಪಟ್ಟ ನಂತರ ಅಡಮಾನ ಪತ್ರಕ್ಕೊಳಪಟ್ಟ ಸ್ಥಿರಾಸ್ತಿಯನ್ನು ನಾನು ಮತ್ತು ನನ್ನ ಸಹೋದರರು ವಿಭಾಗ ಮಾಡಿಕೊಂಡಿದ್ದು, ಈ ಬಗ್ಗೆ ಪ್ರತಿವಾದಿಗೆ ನೋಟಿಸ್ ನೀಡಿಲ್ಲ. ನಂತರ ನಾನು ಮತ್ತು ನನ್ನ ಸಹೋದರರೆಲ್ಲರೂ ಸೇರಿ ನಮ್ಮ ಜಮೀನಿನಲ್ಲಿದ್ದ ಕರಿಕಲ್ಲು ತೆಗೆಯಲು ಪ್ರತಿವಾದಿಗೆ ಅನುಮತಿ ನೀಡಿರುತ್ತೇವೆ ಎಂದರೆ ಸರಿ. ಸದರಿ ಕರಿಕಲ್ಲು ತೆಗೆಸಲು ಪ್ರತಿವಾದಿ ನನ್ನ ತಂದೆಯ ಹೆಸರಿನಲ್ಲಿ ಪರವಾನಗಿ ಪಡೆದಿರುತ್ತಾರೆಂದರೆ ಸರಿ. ಪ್ರತಿಯೊಂದು ಪರವಾನಗಿ ಮತ್ತು ಇತರೆ ವ್ಯವಹಾರ ನನ್ನ ತಂದೆಯ ಹೆಸರಿನಲ್ಲಿಯೆ ನಡೆಯುತ್ತಿತ್ತು ಎಂದರೆ ಸರಿ. ನಮ್ಮ ಜಮೀನಿನ ಮೇಲೆಯೆ ಕರಿಕಲ್ಲು ಇತ್ತು, ಅದನ್ನು ಸುಮಾರು 50 ಅಡಿಯವರೆಗೆ ತೆಗೆದಿರುತ್ತಾರೆ. ಆ ರೀತಿ ಕರಿಕಲ್ಲು ತೆಗೆಯಲು ಪ್ರತಿವಾದಿಯೆ ಜೆ.ಸಿ.ಬಿ ಮತ್ತು ಇತರೆ ಯಂತ್ರೋಪಕರಣಗಳ ಖರ್ಚನ್ನು ಪ್ರತಿವಾದಿಯೇ ಭರಿಸಿರುತ್ತಾರೆ ಎಂದರೆ ಸರಿ. ಈ ರೀತಿ ಕರಿಕಲ್ಲು ತೆಗೆಯಲು ಮತ್ತು ಯಂತ್ರೋಪಕರಣಗಳ ಖರ್ಚು ಹಾಗು ಕಾರ್ಮಿಕರ ಕೂಲಿ ವೆಚ್ಚ ಸೇರಿ ಒಟ್ಟು ಸುಮಾರು ರೂ.15 ರಿಂದ 20 ಲಕ್ಷ ಖರ್ಚಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಯು 2004 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆ ಮೃತಪಟ್ಟ ನಂತರ ಪ್ರತಿವಾದಿ ತೆಗೆಸಿದ್ದ ಕರಿಕಲ್ಲನ್ನು ಅವರಿಗೆ ಗೊತ್ತಾಗದಂತೆ ನಾನು ಮತ್ತು ನನ್ನ ಸಹೋದರರೆಲ್ಲರೂ ಸೇರಿ ಮಾರಾಟ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ಸಂಬಂಧ ಬಿಳಿಗೆರೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದರು ಎಂದರೆ ಸರಿ, ಆದರೆ ಪೊಲೀಸರು ಎಲ್ಲಾವನ್ನು ಪರಿಶೀಲಿಸಿ ಸ್ಥಳಕ್ಕೆ ಬಂದು ಮಹಜರ್ ಮಾಡಿ ಕೊಟ್ಟಿರುವ ದೂರು ಸುಳ್ಳು ಎಂದು ಹೇಳಿರುತ್ತಾರೆ. ನಾವೇ 2004 ರವರೆಗೂ ಕರಿಕಲ್ಲನ್ನು

ಮಾರಾಟ ಮಾಡಿರುವುದರಿಂದ ಯಂತ್ರೋಪಕರಣಗಳ ಖರ್ಚು ಸಹ ಪ್ರತಿವಾದಿಗೆ ಸಿಕ್ಕಿರುವುದಿಲ್ಲ ಮತ್ತು ಅವರಿಗೆ ನಷ್ಟ ಉಂಟು ಮಾಡಿರುತ್ತೀರಾ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,**
**ನಂಜನಗೂಡು.**